<u>**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ರಾಣೇಬೆನ್ನೂರು.**</u>

**ಸಿಸಿ ನಂಬರಃ** 1193/2019

ಡಿ ಡಬ್ಲೂ 1

**ಸಾಕ್ಷಿದಾರರ ಹೆಸರು** : ನಾಗರಾಜ ಹಾಲಪ್ಪ ಚಲವಾದಿ

**ತಂದೆಯ ಹೆಸರು** : ಹಾಲಪ್ಪ

**ವಯಸ್ಸು** : 52 **ವರ್ಷ**

**ಉದ್ಯೋಗ** : ವ್ಯಾಪಾರ

**ವಾಸ** : ರಾಣೇಬೆನ್ನೂರು.

**ದಿನಾಂಕಃ 29-05-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ ಆರೋಪಿ ಪರ ವಕೀಲರಿಂದಃ**

1. ನಾನು ಶ್ರೀ ಯಶಸ್ವಿ ಕಾಟನ್ ಟ್ರೇಡರ್ಸ ಹೆಸರಿನಲ್ಲಿ ಹತ್ತಿ ವ್ಯಾಪಾರ ಮಾಡುತ್ತಿದ್ದೆ. ಕಳೆದ 3-4 ವರ್ಷಗಳಿಂದ ಸದರಿ ಕಂಪನಿ ಬಂದ್ ಆಗಿದೆ. ದೂರುದಾರ ಶರಣಬಸವೇಶ್ವರ ಟ್ರೇಡಿಂಗ್ ಕಂಪನಿ ನನಗೆ ಗೊತ್ತಿದೆ. ನಾವು ದೂರುದಾರ ಸಂಸ್ಥೆಯಿಂದ ಹತ್ತಿ ಖರೀದಿ ಮಾಡಿ, ಅದನ್ನು ಬೇರೆಯವರಿಗೆ ಮಾರಾಟ ಮಾಡಿ, ನಂತರ ದೂರುದಾರರಿಗೆ ಹಣ ನೀಡುತ್ತಿದ್ದೆವು. ನಾವೇ ಹಣವನ್ನು ದೂರುದಾರನ ಖಾತೆಗೆ ಜಮೆ ಮಾಡುತ್ತಿದ್ದೆವು. ಸದರಿ ವ್ಯವಹಾರದ ಕುರಿತು ಯಾವುದೇ ದಾಖಲೆ ಬರೆದಿರಲಿಲ್ಲ ಆದರೆ ದೂರುದಾರರು ಭದ್ರತೆಗಾಗಿ ನನ್ನಿಂದ ಒಂದು ಸಹಿ ಮಾಡಿದ ಖಾಲಿ ಚೆಕ್ ಹಾಗೂ ಒಂದು ಸಹಿ ಮಾಡಿದ ಖಾಲಿ ಲೆಟರ್ ಪ್ಯಾಡ್ ಪಡೆದುಕೊಂಡಿದ್ದರು.

2. ದೂರುದಾರರೊಂದಿಗೆ ಈಗ ನಾನು ವ್ಯವಹಾರ ಮಾಡುವುದಿಲ್ಲ. 3-4 ವರ್ಷಗಳ ಹಿಂದೆಯೇ ಅವರೊಂದಿಗಿನ ವ್ಯವಹಾರ ಬಂದ್ ಮಾಡಿದ್ದೇನೆ. ಹತ್ತಿ ವ್ಯವಹಾರದ ಕುರಿತು ನನ್ನ

ಹಾಗೂ ದೂರುದಾರನ ಮಧ್ಯ ಯಾವುದೇ ಹಣಕಾಸಿನ ವಿಚಾರ ಬಾಕಿ ಇಲ್ಲ. ನಾನು ದೂರುದಾರನೊಂದಿಗೆ ಬೇರೆ ಯಾವುದೇ ವ್ಯವಹಾರ ಮಾಡಿಲ್ಲ. ನಾನು ದೂರುದಾರರಿಂದ ಯಾವುದೇ ಕೈಗಡ ಸಾಲ ಪಡೆದಿಲ್ಲ. ನಮ್ಮ ಹತ್ತಿ ವ್ಯವಹಾರದ ಕುರಿತು ಭದ್ರತೆಗಾಗಿ ಮಾತ್ರ ನಾನು ಚೆಕ್ ನೀಡಿದ್ದೆ.

**ಮುಂದುವರೆದ ಮುಖ್ಯ ವಿಚಾರಣೆಯನ್ನು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

ಸಹಿ/–

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.